

ಮೂರ್ಖತನದ ಕೆಲಸ. ನನ್ನ ನಿಲುವುಗಳಿಂದ ಬೇರೆಯಾದ ಲೋಕವನ್ನು, ಮನಸ್ಸುಗಳನ್ನು ತೋರುವ ಸಾಹಿತ್ಯ ಓದುವುದು ನನಗೆ ಇಷ್ಟವಾದದ್ದು. ಅಂಥ ಸಾಹಿತ್ಯ ಪ್ರಾಮಾಣಿಕವಾದದ್ದಿರಬೇಕು, ಅದರ ಬರಹದ ಶೈಲಿ ಒಳ್ಳೆಯದಿರಬೇಕು ಅಂತ ಕೇಳುತ್ತೇನೆ, ಅಷ್ಟೆ' ಅನ್ನುತ್ತಿದ್ದರು ಅವರು.

ವ್ಯಕ್ತಿಗಳಿಗೆ (ಅದರಲ್ಲಿಯೂ ರಾಜಶೇಖರರಂಥವರಿಗೆ) ಲೇಬಲ್ ಹಚ್ಚುವುದು ಮಾರಣಾಂತಿಕವಾದದ್ದಾರೂ, ಅವರು ಮತ್ತು ಅವರಂಥವರ ಮನೋಧರ್ಮವನ್ನು, ಸ್ಥೂಲವಾಗಿಯೆ ಆದರೂ, ಒಂದು ಚೌಕಟ್ಟಿನಲ್ಲಿ ಗ್ರಹಿಸುವುದರಲ್ಲಿ ಪ್ರಯೋಜವಿದೆ ಅನ್ನಿಸಿ, ಈಗ ಆ ಸಾಹಸಕ್ಕೆ ಕೈಹಾಕುತ್ತೇನೆ. ಆ ದಿಸೆಯಲ್ಲಿ, ಇಲ್ಲಿ ಈವರೆಗೆ ಮುಂದಿಟ್ಟದ್ದರ ಹಿನ್ನೆಲೆಯಲ್ಲಿ, ಹೀಗೆ ಹೇಳಬಹುದು:

* ರಾಜಶೇಖರರು 'ಜನ್ನನ ಯಶೋಧರ ಕಾವ್ಯದ ದ್ವಂದ್ವ ವಿನ್ಯಾಸ' ಎಂಬ, ಮುಖ್ಯವಾದ, ಪ್ರಬಂಧವನ್ನು ನಲವತ್ತು ವರ್ಷಗಳಷ್ಟು ಹಿಂದೆಯೆ, 'ರುಜುವಾತು' ಪತ್ರಿಕೆಯ ಆರನೆಯ ಸಂಚಿಕೆಯಲ್ಲಿ, ಪ್ರಕಟಿಸಿದರು ಮತ್ತು ವಚನ ಸಾಹಿತ್ಯಕ್ಕೆ ತುಂಬ ಒಲಿದಿದ್ದರಾದರೂ, ಹಳಗನ್ನಡ ಸಾಹಿತ್ಯವನ್ನು ಬಹಳವಾಗೇನೂ ಓದಿಕೊಂಡಿರಲಿಲ್ಲ. ಕನ್ನಡ ಸಾಹಿತ್ಯದಲ್ಲಿ ಅವರ ಮುಖ್ಯವಾದ ಆಸಕ್ತಿ, ಓದು ಇದ್ದದ್ದು ಇಪ್ಪತ್ತನೆಯ ಶತಮಾನದ ಕೃತಿಗಳಲ್ಲಿ, ಅದರಲ್ಲಿಯೂ ನವ್ಯ ಮತ್ತು ಅದರ ನಂತರ ಬಂದ ಹಾಗೂ ಬರುತ್ತಿರುವ ಬರಹಗಳಲ್ಲಿ. ಸಾಹಿತ್ಯದ ವಿಷಯದಲ್ಲಿ ಅವರದ್ದು ಆಧುನಿಕ–ನವ್ಯತಾವಾದಿ, ಫ್ಯಾಸಿಸ್ಟ್ ವಿರೋಧಿ, ವಿಶ್ವಾಲಿಂಗನದ ಸಾಹಿತ್ಯಿಕ ಸಂವೇದನೆ (**modernist, cosmopolitan, and antifascist literary sensibility**) ಆಗಿತ್ತು.

* ಜೀವನದ ದರ್ಶನ ಮತ್ತು ತಾತ್ತ್ವಿಕತೆಯಲ್ಲಿ ಅವರು, ಸ್ಥೂಲವಾದ ನೆಲೆಯಲ್ಲಿ, ಅಸ್ತಿತ್ವವಾದಿ, ಮತ್ತು ಮಾರ್ಕ್ಸಿಸ್ಟ್ ಉದಾರವಾದಿ ಪ್ರಜಾತಾಂತ್ರಿಕರಾಗಿದ್ದರು. ಅದಾಗಲೇ ಹೇಳಿರುವಂತೆ, ಕಮೂ, ಸಾರ್ತ್ರ್‌ರನ್ನು ಅವರು ಮನಸ್ಸಿಗಿಳಿಸಿಕೊಂಡಿದ್ದರು. ಹಾಗಾಗಿ, ಅಸ್ತಿತ್ವವಾದವು ವ್ಯಕ್ತಿಯ ಮುಂದೆ ಆಯ್ಕೆಯ ಪ್ರಶ್ನೆಯನ್ನಿಟ್ಟು, 'ಸಂಕಟದ, ಸಂದಿಗ್ಧದ ಪರಿಸ್ಥಿತಿಯಲ್ಲಿ ನೀನು ಮಾಡಿಕೊಳ್ಳುವ ನೈತಿಕ ಛಲದ ಆಯ್ಕೆಯಲ್ಲಿ ನಿನ್ನ ಅಸ್ತಿತ್ವದ ತಥ್ಯ ಆಗುತ್ತ, ಮೂಡುತ್ತ ಹೋಗುತ್ತದೆ. ನೀನು ಮಾಡಿಕೊಳ್ಳುವ ಆಯ್ಕೆಯಲ್ಲಿ ನಿನ್ನ ರುಜುತ್ವ ಅಡಗಿರುತ್ತದೆಯೆ ಹೊರತು ನಿನ್ನ ಜಾತಿ, ಮತ, ದೇಶ, ಭಾಷೆ, ಪಂಥ, ಬಣ್ಣ, ವರ್ಗ ಮೊದಲಾದ ಯಾವುದೇ, ತಥಾಕಥಿತ, ಅಸ್ಮಿತೆಯಿಂದ